# ಶೀಲವೇ ಅತ್ಯಂತ ಶ್ರೇಷ್ಠವಾದುದು



ಒಂದು ಸಲ ಬೋಧಾಯನ ಮಹರ್ಷಿಗಳು ಶಿಷ್ಯಂದಿರ ಒತ್ತಾಯಕ್ಕೆ ಮಣಿದು, ಆಶ್ರಮದಿಂದ ದೂರದಲ್ಲಿದ್ದ ನದೀದಡಕ್ಕೆ ಹೋದರು. ಗುರು, ಶಿಷ್ಯರೆಲ್ಲ ಸೇರಿ ಬಹಳ ಹೊತ್ತು ಮೀನುಗಳಂತೆ ನೀರಿನಲ್ಲಿ ಜಲಕ್ರೀಡೆಯಾಡಿದರು. ಭೋಜನ ಮುಗಿಸಿದ ಬಳಿಕ ತಮ್ಮ ಉತ್ತರೀಯಗಳನ್ನು ಹರಡಿ ಅಲ್ಲೇ ವಿಶ್ರಮಿಸಿಕೊಂಡರು. ಅತಿಯಾಗಿ ಆಯಾಸಗೊಂಡಿದ್ದ ಎಲ್ಲರೂ ಬಹಳ ಬೇಗನೆ ನಿದ್ರಾವಶರಾದರು. ಬೆಳಗಾಗುತ್ತಲೇ ಮಹರ್ಷಿಗಳ ನಿದ್ರೆಗೆ ಭಂಗವುಂಟಾಯಿತು. ಎದ್ದು ನೋಡಿದ ಅವರು, ಪಕ್ಕದಲ್ಲಿದ್ದ ಮರದ ಕೆಳಗೆ ತಮ್ಮ ಪ್ರಿಯಶಿಷ್ಯ ಗಾರ್ಗ್ಯನು ಇನ್ನೂ ನಿದ್ರಿಸುತ್ತಿದ್ದುದನ್ನು ಕಂಡರು. ಅವನನ್ನು ಎಬ್ಬಿಸಲು ಬಳಿಗೆ ಹೋದರೆ ಕಂಡದ್ದೇನು? ಗಾರ್ಗ್ಯನು ಎಚ್ಚೆತ್ತಿದ್ದ, ಆದರೆ ಒಂದು ಸರ್ಪವು ಅವನ ಕಾಲನ್ನು ಸುತ್ತಿಕೊಂಡು ನಿದ್ರಿಸುತ್ತಿತ್ತು . ಗಾರ್ಗ್ಯನು ಮೆತ್ತನೆಯ ಧ್ವನಿಯಲ್ಲಿ ಹೇಳಿದ: ''ಗುರುಗಳೇ! ಚಿಂತಿಸಬೇಡಿ. ಹಾವು ನಿದ್ದೆಯಿಂದ ಎದ್ದ ಕೂಡಲೇ ತಾನಾಗಿ ಹೊರಟುಹೋಗುವುದು. ಅದಕ್ಕೆ ನಿದ್ರಾಭಂಗ ಮಾಡಬಾರದು.'' ಅದೇ ರೀತಿಯಲ್ಲೇ ನಡೆಯಿತು ಕೂಡ. ಒಂದು ಗಂಟೆಯ ನಂತರ ಆ ಸರ್ಪವು ನಿದ್ದೆ ಬಿಟ್ಟೆದ್ದು, ಅವನ ಕಾಲುಗಳಿಂದ ಕಳಚಿಕೊಂಡು, ತನ್ನ ಬಿಲದತ್ತ ತಾನಾಗಿಯೇ ಹೊರಟುಹೋಯಿತು.

ಇದನ್ನು ನೋಡಿದ ಮಹರ್ಷಿಗಳು ಆನಂದಗೊಂಡು, ತಮ್ಮ ಶಿಷ್ಯನನ್ನು ಆಶೀರ್ವದಿಸಿ, ಹೊಗಳುತ್ತ ಹೇಳಿದರು: ''ಮಗೂ, ನಿನ್ನ ಈ ಶೀಲ ಸಂಪತ್ತು ಅಕ್ಷಯವಾಗಲಿ!'' ಅದನ್ನು ಕೇಳಿದ ಇನ್ನೊಬ್ಬ ಶಿಷ್ಯ ಮೈತ್ರಾಯಣನು ಆಶ್ಚರ್ಯಗೊಂಡು, ''ಭಗವನ್! ಗಾರ್ಗ್ಯನು ಅಸಾಧಾರಣ ಸಾಹಸವನ್ನು ಪ್ರದರ್ಶಿಸಿದ್ದಾನೆ, ಶೀಲವನ್ನಲ್ಲ'' ಎಂದು ಗುರುಗಳ ಬಳಿ ಹೇಳಿದ. ಮಹರ್ಷಿಗಳು ನಗುತ್ತ ಹೇಳಿದರು: ''ಮಗೂ, ನೀರಿನ ಘನರೂಪವೇ ಹಿಮ. ಅದೇ ರೀತಿ, ಶೀಲದ ಘನರೂಪವೇ ಸಾಹಸ. ವಿಷಮ ಪರಿಸ್ಥಿತಿಯಲ್ಲೂ, ಗಂಡಾಂತರದ ಸನ್ನಿವೇಶದಲ್ಲೂ ತನ್ನ ಮನಸ್ಥಿತಿಯಲ್ಲಿ ಯಾವುದೇ ಬದಲಾವಣೆಯಿಲ್ಲದೆ ಸ್ಥಿರವಾಗಿ ಇರುವ ಸಾಹಸ ಶೀಲವಿದ್ದರೆ ಮಾತ್ರ ಸಾಧ್ಯ. ಆದ್ದರಿಂದ ಅವನ ಹಿರಿಮೆಯಿರುವುದು ಅವನ ಶೀಲದಲ್ಲೇ – ಅದಕ್ಕೆ ನಾನು ಹಾಗೆ ಹೇಳಿದೆ'' ಎಂದರು. *(ಹಿಂದೀ ಮೂಲ: 'ಪ್ರೇರಕ ಪ್ರಸಂಗ')*

# ಸಾರ್ವಲೌಕಿಕ ಕಲ್ಯಾಣ : ವೇದಾಂತದ ದೃಷ್ಟಿ

ಮಾನವ ಮತ್ತು ಅವನ ಹಿತಗಳ ಸಂಘಟನೆಯ ಜೊತೆಗೆ ವೇದಾಂತವು ಎಲ್ಲ ಅಸ್ತಿತ್ವದ ಏಕತೆಯನ್ನು ಪ್ರತಿಪಾದಿಸುವುದು. ಮಾನವನ ಸುಖ-ಕಲ್ಯಾಣಗಳೇ ವೇದಾಂತದ ಉದ್ದೇಶ — ಜಾತಿ, ಮತ, ವರ್ಗಗಳಾಗಿ ವಿಭಜಿತನಾದ ಮಾನವನಲ್ಲ; ಎಲ್ಲಿದ್ದರೂ ಮನುಷ್ಯನಾಗಿ ಅವನ ಕಲ್ಯಾಣವನ್ನು ಬಯಸುವುದು.

ಮಾನವನ ಕೈಗೆ ಅಪಾರ ಶಕ್ತಿ ದೊರೆತಾಗ ಅವನ ಇಡೀ ವ್ಯಕ್ತಿತ್ವ ನೈತಿಕವಾಗಿಯೂ ಆಧ್ಯಾತ್ಮಿಕವಾಗಿಯೂ ಹದಗೊಂಡು ಅವನ ಹೃದಯದಲ್ಲಿ ಇನ್ನೂ ಹೆಚ್ಚಿನ ಶಕ್ತಿ ಉತ್ಪನ್ನವಾಗಬೇಕು. ತನ್ನ ವ್ಯಕ್ತಿತ್ವದ ಗುರುತ್ವಕೇಂದ್ರ ಅವನೊಳಗಿರದೆ ಅದಕ್ಕಾಗಿ ಅವನು ಹೊರಗಡೆ ಹುಡುಕುವಂತಾದರೆ ಜೀವನಸಂಗ್ರಾಮದಲ್ಲಿ ಅವನು ಸೋತುಹೋಗುತ್ತಾನೆ. ಆಂತರಿಕ ಜೀವನದ ಈ ಸಂಪನ್ನತೆಯು ನಾಗರಿಕತೆಗೆ ಧರ್ಮದ ಅಪೂರ್ವ ಕಾಣಿಕೆಯಾಗಿದೆ. ಅದು ಮರದ ಶಾಖೆಗಳು ಬೆಳೆಯುವುದರ ಜೊತೆಗೆ ಬೇರುಗಳು ಇನ್ನೂ ಆಳಕ್ಕೆ ಊರುವ ಹಾಗೆ. ಧರ್ಮದ ಸಂದೇಶ ಸಾರೋದ್ಧಾರವಾದುದು. ಶಾಶ್ವತವಾದುದು.

ನಿರ್ಭಯ, ಸಾಮರಸ್ಯ, ಸಾರ್ವಲೌಕಿಕ ಭಾವನೆಗಳನ್ನು ಹೊರಹೊಮ್ಮಿಸುವ ವೇದಾಂತದಲ್ಲಿ ಈ ವಿವೇಚನೆ ಅಥವಾ ಆಧ್ಯಾತ್ಮಿಕತೆ ಹಾಸುಹೊಕ್ಕಾಗಿದೆ. ವೇದಾಂತದಿಂದ ಬಲಗೊಂಡಂಥ ಧರ್ಮಕ್ಕೆ ವಿಜ್ಞಾನದ ಮುನ್ನಡೆಯಿಂದಾಗಲಿ ಸಾಮಾಜಿಕ-ರಾಜಕೀಯ ವಿಚಾರಗಳ ಬೆಳವಣಿಗೆಯಿಂದಾಗಲಿ ಏನೂ ಭಯವಿಲ್ಲ. ಅದರಡಿ ವಿಜ್ಞಾನ, ರಾಜಕಾರಣ ಮತ್ತು ಧರ್ಮದ ಸಾಮರಸ್ಯದಿಂದ, ಸಹಕಾರ ಭಾವನೆಯಿಂದ ಕೆಲಸಮಾಡುತ್ತ ಎಲ್ಲೆಲ್ಲೂ ಸಮಗ್ರ ಮಾನವ ಕಲ್ಯಾಣಕ್ಕೆ ನೆರವಾಗುತ್ತವೆ. ಅದರ ಘೋಷಿತ ಉದ್ದೇಶವೇ ಸಾರ್ವಲೌಕಿಕ ಮಾನವ ಕಲ್ಯಾಣ; ರಾಷ್ಟ್ರೀಯ ಅಥವಾ ವರ್ಗೀಯ ಅಥವಾ ಭಾಗಶಃ ಅಲ್ಲ. ಭೌತಿಕ, ಆಧ್ಯಾತ್ಮಿಕ ಮತ್ತು ಬೌದ್ಧಿಕ ಸ್ವಾತಂತ್ರ್ಯವೇ ವೇದಾಂತದ ಗುರಿ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ *('ಕೃತಿಶ್ರೇಣಿ', ಸಂ ೩, ಪು. ೧೧೭)*. ಅದು ಅಲೌಕಿಕವನ್ನಷ್ಟೇ ಅಲ್ಲ ಐಹಿಕ ಕಲ್ಯಾಣವನ್ನೂ, ನಿಃಶ್ರೇಯಸ್ಸನ್ನಷ್ಟೇ ಅಲ್ಲ ಅಭ್ಯುದಯವನ್ನೂ ಅರಸುತ್ತದೆಂದು ಕ್ರಿ.ಶ. ಎಂಟನೆಯ ಶತಮಾನದ ಮಹಾವೇದಾಂತಿ ಗೌಡಪಾದರು ಘೋಷಿಸಿದ್ದಾರೆ *(ಮಾಂಡೂಕ್ಯೋಪನಿಷತ್ ಕಾರಿಕಾ, ೪.೨)* :

'ಎಲ್ಲ ಅಸ್ತಿತ್ವದ ಸಂಘಟನೆಯನ್ನು ಸಾರುವ, ಎಲ್ಲ ಜೀವಿಗಳ ಸುಖಸಂತೋಷವನ್ನರಸುವ, ಘರ್ಷಣೆ ಮತ್ತು ಅಸಂಗತಿಗಳಿಂದ ಮುಕ್ತವಾದ ಈ ಏಕತೆಯ ಮಹಾ ವೇದಾಂತಕ್ಕೆ ನಾನು ನಮಿಸುವೆ.'

— ಸ್ವಾಮಿ ರಂಗನಾಥಾನಂದ